ಅಸಲು ದಾವಾ ಸಂಖ್ಯೆ:1679/2014 ಪಿಡಬ್ಲ್ಯೂ -1

**<u>4 ನೇ ಅಪರ ಸಿವಿಲ್ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>**

ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕ:14.11.2022.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎಸ್.ಆರ್. ವಕೀಲರಿಂದ</u>**

ನಿ.ಪಿ.12 ರಿಂದ 15 ರಲ್ಲಿ ಸರ್ವೆ ನಂಬರ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಿದ್ಯುತ್ ಬಿಲ್ ನಲ್ಲಿ ಸರ್ವೆ ನಂಬರ ಬರೆಯುುವುದಿಲ್ಲ ಎಂದು ಹೇಳುತ್ತಾರೆ. ವಿದ್ಯುತ್ ಶಕ್ತಿಯನ್ನು ನೀಡುವ ಮುನ್ನ ವರ್ಕ ಆರ್ಡರ್ ನ್ನು ನೀಡುತ್ತಾರೆ ಎಂದರೆ ಸರಿ, ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿ.ಪಿ.1 ರ ಶೆಡ್ಯೂಲ್ ನಲ್ಲಿ ತಿರುಮಲ ನಗರವೆಂದು ಇದ್ದು ಅದರಂತೆ ನಿ.ಪಿ.17 ರಲ್ಲಿ ತಿರುಮಲ ನಗರವೆಂದು ನಮೂದು ಆಗಿರುವುದಿಲ್ಲ ಎಂದರೆ ಸರಿ. ನಿ.ಪಿ.17 ರಲ್ಲಿ ಸರ್ವೆ ನಂಬರ ನಮೂದು ಆಗಿರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ 29 ಕ್ಕೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿ 2 ಎಕರೆ 10 ಗುಂಟೆ ಜಾಗವನ್ನು ಬ್ಯಾಂಕ ಗೆ ಅಡಮಾಡಿಸಿರುವುದು ನನಗೆ ಗೊತ್ತಿಲ್ಲ.

2. ಸರ್ವೆ ನಂಬರ 29 ರ ಈಗಿನ ಪಹಣಿಯನ್ನು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಿವೇಶನಗಳಾಗಿರುತ್ತವೆ, ಅನಂತರ ತಮ್ಮ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆ ಇರುವುದಾಗಿ ಹೇಳುತ್ತಾರೆ. ಸದರಿ ಜಾಗ ಭೂ ಪರಿವರ್ತನೆಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಈಗ ಒಂದು ಶೆಡ್ ಇರುತ್ತದೆ, ಅದನ್ನು ಪಡೆಯಲು ಯಾವುದೆ ಪರವಾನಿಗೆಯನ್ನು ಡೆದಿರುವುದಿಲ್ಲ. ನಿ.ಪಿ.16 ರಲ್ಲಿ ಸರ್ವೆ ನಂಬರ ನಮೂದು ಆಗಿರುವುದಿಲ್ಲ. ನಿ.ಪಿ.18 ರ ಆಸ್ತಿ ತೆರಿಗೆ ರಸೀದಿಗಳಲ್ಲಿ ತಿರುಮಲಪ್ಪ ಲೇಔಟ ಎಂದು ಬರೆದಿರುತ್ತದೆ ಎಂದರೆ ಸರಿ. ಆ ಕಾರಣ ನಿ.ಪಿ.18 ದಾವಾ ಆಸ್ತಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.12 ರಿಂದ 18 ದಾವೆಗಾಗಿ ಸೃಷ್ಟಿ ಮಾಡಿರುವ ದಾಖಲೆಗಳಾಗಿದ್ದು, ಅವು ದಾವೆಗೆ ಸಂಬಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABR030017852014/truecopy/order-6.pdf

www.ecourtsindia.com

**<u>ಮರುವಿಚಾರಣೆಃ</u> ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಹೇಳಿಕೆಯ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸಹಿ ಮಾಡಿದ್ದಾರೆ
Sd/-
(ಶ್ರಿ.ಕಿರಣ.ಪಿ.ಎಮ್. ಪಾಟೀಲ)
4 ನೇ ಅಪರ ಸಿವಿಲ್ ನ್ಯಾಯಾಧೀಶರು
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

This is a True Copy of the Court Records Online. Authenticated @ districts.ecourtsindia.com/cnr/KABR030017852014/truecopy/order-6.pdf

www.ecourtsindia.com